ಮೈಸೂರ ಗೆಜಿಟ್.

ಸಂ. 42.] ಸರ್ಕಾರದಿಂದ ಪ್ರಾಯುಷ್ಯ ಆಜ್ಞೆ. [ನಂ. 12

ಬೆಂಗಳೂರು, ಗುರುವಾರ, ಮಾರ್ಚಿ ತಾ॥ 21, ಸ್ಯ 1907.

III ನೆ ಭಾಗ.

ಲೆಜಿಸ್ಲೆಟಿವು ರೆಗ್ಯುಲೇಷನುಗಳು ಮತ್ತು ಅವುಗಳಂಜಿ ಅದ ನಿಬಂಧನೆಗಳು.
ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೆಟಿವ್ ಇಲಾಖೆ.

ತಾರೀಖು 8ನೆ ಮಾರ್ಚಿ 1907.

ನಂ. ಜೆ. 2753.—ಲೆಜಿಸ್. 21-06--೨, 1905ನೆ ಇಸವಿಯ 3ನೆ ನಂಬರಿನ ಮೈಸೂರು ಅನ್ಯೋನ್ಯ ಸಹಾಯ ಸಂಘಗಳ ರೆಗ್ಯುಲೇಷನಿನ ಪ್ರಕಾರ ಪ್ರಕಟಿಸಬೇಕೆಂದು ಉದ್ದೇಶಿಸಿರುವ ನಿಬಂಧನೆಗಳ ಈ ಕೆಳಗಿನ ಮಸೂವಿದಾ ಯಾ ಚಿತ್ತು ಪ್ರತಿಯನ್ನು ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಪ್ರಕಟಿಸಿ ಇದೆ. 1907ನೆ ಇಸವಿಯ ಏಪ್ರಿಲ್ 1ನೆ ತಾರೀಖಿನ ದಿನ ಅಥವಾ ಅದಕ್ಕೆ ತರುವಾಯ ಸದರಿ ಚಿತ್ತು ಪ್ರತಿಯನ್ನು ಆಲೋಚನೆಗೆ ತೆಗದುಕೊಳ್ಳಲಾಗುವುದು.

ಆ ತಾರೀಖಿಗೆ ಮುಂಚೆ ಬರುವ ಎಲ್ಲಾ ಗುಣಮೋಷನಿರೂಪಣೆಗಳನ್ನೂ ಸೂಚನೆಗಳನ್ನೂ ಕ್ರಮವಾಗಿ ಆಲೋಚಿಸಲಾಗುವುದು.

ಅಪ್ಪಣೆಯ ಮೇರೆಗೆ,
" ಕೆ. ಎಸ್. ಚಂದ್ರಶೇಖರ ಐಯ್ಯರ್,
ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿ.

ಮೆಸೂವಿದಾ ಯಾ ಚಿತ್ತು ಪ್ರತಿ.

1905ನೆ ಇಸವಿಯ ಸೆಪ್ಟಂಬರು 27ನೆ ತಾರೀಖಿನ ಜೆ. 982 – ಲೆಜಿಸ್. 4–3ನೆ ನಂಬರಿನ ಇಸ್ತಿಹಾರ್ನಾಮೆಯೊಡನೆ ಪ್ರಕಟಿಸಿದ ನಿಬಂಧನೆಗಳಿಗೆ ಪುರವಣಿಯಾಗಿಯೂ 1905ನೆ ಇಸವಿಯ 3ನೆ ನಂಬರು ಮೈಸೂರು ಅನ್ಯೋನ್ಯ ಸಹಾಯ ಸಂಘಗಳ ರೆಗ್ಯುಲೇಷನಿನಿಂದ ಕೊಡಲ್ಪಟ್ಟ ಅಧಿಕಾರಗಳನ್ನು ನಡೆಸುವುದರಲ್ಲಿಯೂ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು ಈ ಕೆಳಗಿನ ಅಧಿಕ ನಿಬಂಧನೆಗಳನ್ನು ಮಾಡಲು ಅಪ್ಪಣೆ ದಯಪಾಲಿಸಿರುತ್ತಾರೆ :—

(a) ಸಂಘದ ಸಾಮಾಜಿಕನಾಗಿ ಇರುವ ಅಥವಾ (ಈ ವರೆಗೆ) ಇದ್ದವನಿಗೂ, ಅಥವಾ

(b) ಸಾಮಾಜಿಕನಾಗಿ ಇರುವವನ ಅಥವಾ ಈ ವರೆಗೆ ಇದ್ದವನ ಮೂಲಕವಾಗಿ ಕೇಳಿಬರುವವನಿಗೂ,

ಮತ್ತು ಅಂಥಾ ಸಂಘಕ್ಕೂ ಅಥವಾ ಅದರ ಕಮಿಟಿಯಾ ಸಭೆಗೂ ಅಥವಾ ಅದರ ಉದ್ಯೋಗಸ್ಥರಲ್ಲಿ ಯಾವನಿಗೂ,

ಸಂಘದ ಕೆಲಸದ ವಿಷಯದಲ್ಲಿ ಉಂಟಾದ ಯಾವುದಾದರೂ ವಿವಾದವು ನಿರ್ಣಯದ ಬಗ್ಗೆ ರಿಜಿಸ್ಟ್ರಾರಿಗೆ ಕಳುಹಿಸಲ್ಪಡತಕ್ಕದ್ದು.

(2) 1ನೆ ನಿಬಂಧನೆಯಲ್ಲಿ ಕಂಡ ವಿವಾದದ ನೋಟಿಸು ತಲಪುದಾಗ ರಿಜಿಸ್ಟ್ರಾರು ತಾನೆ ಆ ವಿವಾದವನ್ನು ನಿರ್ಣಯಿಸತಕ್ಕದ್ದು ಅಥವಾ ಮೂವರು ಮಧ್ಯಸ್ಥರಿಗೆ ನಿರ್ಣಯಕ್ಕೆ ಕಳುಹಿಸತಕ್ಕದ್ದು. ವಿವಾದದ ಕಕ್ಷಿಗಾರರಲ್ಲಿ ಪ್ರತಿ ಒಬ್ಬನಿಂದ ಮಧ್ಯಸ್ಥರ ಪೈಕಿ ಒಬ್ಬೊಬ್ಬನೂ ರಿಜಿಸ್ಟ್ರಾರಿಂದ ಮೂರನೆಯವನೂ ನೇಮಿಸಲ್ಪಡತಕ್ಕದ್ದು.

(3) ರಿಜಿಸ್ಟ್ರಾರಿಂದ ನೋಟಿಸು ತಲಪಿದ ಹದಿನೈದು ದಿವಸಗಳೊಳಗಾಗಿ ವಿವಾದದ ಯಾವನಾದರೂ ಕಕ್ಷಿಗಾರನು ಒಬ್ಬ ಮಧ್ಯಸ್ಥನನ್ನು ನೇಮಕ ಮಾಡಲು ತಪ್ಪಿದರೆ ರಿಜಿಸ್ಟ್ರಾರೇ ಅಂಥಾ ನೇಮಕವನ್ನು ಮಾಡತಕ್ಕದ್ದು.

(4) ರಿಜಿಸ್ಟ್ರಾರಿನ ಅಥವಾ ಮಧ್ಯಸ್ಥರ ಮುಂದೆ ನಡೆದ 2ನೆ ನಿಬಂಧನೆಯ ಪ್ರಕಾರದ ನಡವಳಿಕೆಗಳಲ್ಲಿ ಹಾಜರಿರುವ ಕಕ್ಷಿಗಾರರ, ಮತ್ತು ಅವರು ಹಾಜರುಪಡಿಸಬಹುದಾದ ಸಾಕ್ಷಿಗಳ ಹೇಳಿಕೆಗಳನ್ನು ಬರೆದಿಡತಕ್ಕದ್ದು, ಮತ್ತು ಹಾಗೆ ಬರೆದಿಟ್ಟ ಸಾಕ್ಷ್ಯದ ಮೇಲೆ ಮತ್ತು ಉಭಯಪಕ್ಷದವರಿಂದ ಹಾಜರು ಪಡಿಸಲ್ಪಟ್ಟ ಯಾವುದಾದರೂ ದಸ್ತಾವಜಿನ ಸಾಕ್ಷ್ಯವನ್ನು ಆಲೋಚಿಸಿದ ತರುವಾಯ ನ್ಯಾಯಕ್ಕೂ ಧರ್ಮಕ್ಕೂ, ಅಂತಃಕರಣ ಶುದ್ಧಿಗೂ ಅನುಗುಣವಾಗಿ ಸಂದರ್ಭಾನುಸಾರವಾಗಿ ಬಂದು ನಿರ್ಣಯವನ್ನು ಅಥವಾ ತೀರ್ಪನ್ನು ಕೊಡತಕ್ಕದ್ದು.

(5) ನಿರ್ಣಯವು ಅಥವಾ ತೀರ್ಪು ಹಣದ ಸಲಿಕೆಗೆ ಅಥವಾ ಧಾನ್ಯವನ್ನು ಕೊಡುವುದಕ್ಕೆ ಸಂಬಂಧಿಸಿ ಇದ್ದರೆ ಮತ್ತು ಅಂಥಾ ಸಲಿಕೆಯು ಅಥವಾ ಕೊಡೋಣವು ಬಂದು ವಾರದೊಳಗೆ ಅಥವಾ ರಿಜಿಸ್ಟ್ರಾರಿಂದ ಅಪ್ಪಣೆ ಮಾಡಲ್ಪಡಬಹುದಾದ ಇನ್ನೂ ಹೆಚ್ಚು ಕಾಲದೊಳಗೆ ಮಾಡಲ್ಪಡದೆ ಇದ್ದರೆ ನಿರ್ಣಯದ ಅಥವಾ ತೀರ್ಪಿನ ಜಾರಿಯ ಬಗ್ಗೆ ರಿಜಿಸ್ಟ್ರಾರು ನಡವಳಿಕೆಗಳ ಕಾಗದ ಪತ್ರಗಳನ್ನು ಡೆಪ್ಯುಟಿ ಕಮಿಷನರಿಗೆ ಕಳುಹಿಸತಕ್ಕದ್ದು; ಮತ್ತು ಡೆಪ್ಯುಟಿ ಕಮಿಷನರು ಆಗ ನಿರ್ಣಯವು ಜಮ್ಮಾ ಕಂದಾಯದ ಬಾಕಿಗಾಗಿ ಒಂದು ಡಿಕ್ರಿಯಾಗಿದ್ದರೆ ಹೇಗೋ ಹಾಗೆ ಅದನ್ನು ಜಾರಿ ಮಾಡತಕ್ಕದ್ದು.

(6) 1. ಮಧ್ಯಸ್ಥರ ತೀರ್ಪಿನಿಂದ ಸೊಂದ ಯಾವ ಕಕ್ಷಿಗಾರನಾದರೂ ತೀರ್ಪಿನ ತಾರೀಖಿನಿಂದ ಒಂದು ತಿಂಗಳೊಳಗೆ ರಿಜಿಸ್ಟ್ರಾರಿಗೆ ಅಪೀಲ್ಮಾಡಬಹುದು.

2. ಈ ನಿಬಂಧನೆಗಳ ಮೇರೆ ರಿಜಿಸ್ಟ್ರಾರಿಂದ ಮಾಡಲ್ಪಟ್ಟ ಪ್ರತಿ ಅಪ್ಪಣೆಯೂ ಕಡೆಯದಾಗಿಯೂ ಮುಕ್ತಾಯವಾಗಿಯೂ ಇರತಕ್ಕದ್ದು.

(7) ಈ ನಿಬಂಧನೆಗಳ ಪ್ರಕಾರದ ನಡವಳಿಕೆಗಳಲ್ಲಿ ಯಾವ ಕಕ್ಷಿಗಾರನೂ ಯಾವನಾದರೂ ಲಾಯರನ್ನು ತನ್ನ ಪ್ರತಿನಿಧಿಯಾಗಿ ಕಳುಹಿಸಕೂಡದು.